| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 328-2007**

**..................................................Vs....................................**

ಸಾಕ್ಷಿದಾರನ ಹೆಸರು : ಎಂ. ಅಚ್ಯುತ ಗೌಡ ಪಿ.ಡಬ್ಲ್ಯೂ: **5**

ತಂದೆಯ ಹೆಸರು: ಅಣ್ಣಯ್ಯ ಗೌಡ ಸಿ.ಡಬ್ಲ್ಯೂ: **14**

ಪ್ರಾಯ : **74** ವರ್ಷ

ಉದ್ಯೋಗ : ನಿವೃತ್ತ ಪಿ ಎಸ್ ಐ

ವಾಸ : ಮಂಗಳೂರು

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿ: **05-02-2021**

**<u>ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ</u>**

ನಾನು ಜುಲೈ 1998 ರಿಂದ ಜುಲೈ 2001 ರವರೆಗೆ ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 27-08-1998 ರಂದು ಸಿಪಿಐ ವಿಶ್ವನಾಥ ಪಂಡಿತ್ ಇವರು ಈ ಕೇಸಿನ ಕಡತ ಮತ್ತು ಮು ಮಾ ಗಳನ್ನು ಕೊಟ್ಟು ಮುಂದಿನ ತನಿಖೆಗೆ ಆದೇಶಿಸಿರುತ್ತಾರೆ. ಅದರಂತೆ ನಾನು ಅದೇ ದಿನ ಸಾಕ್ಷಿದಾರರಾದ ಶ್ರೀಮತಿ ಕ್ಯಾರಿ, ಸುಜಾತ ಮತ್ತು ಅಮ್ಮಣ್ಣಿ ಇವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ದಿ: 06-09-1998 ರಂದು ಈ ಪ್ರಕರಣದ ಆರೋಪಿ ಶಿವಣ್ಣ ಇವರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುವುದಾಗಿ ಮೆಮೊ ಬಂದಿರುತ್ತದೆ. ಆರೋಪಿ ಜಯಶಂಕರ ಎನ್ನುವವರ ಪತ್ತೆಯಾಗಿರುವುದಿಲ್ಲ. ತನಿಖೆಯಿಂದ ಶಿವಣ್ಣ ಮತ್ತು ಜಯಶಂಕರ ಇವರು ಮನೆಯನ್ನು ಬಾಡಿಗೆಗೆ ಪಡೆದಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಜಯಶಂಕರ ಇವರು ನ್ಯೂ ದ್ವಾರಕಾ ಹೋಟೆಲಿನ ಮಾಲೀಕರಾಗಿದ್ದು, ಅದನ್ನು ಅವರು ನಡೆಸುತ್ತಿದ್ದು, ಅಗ್ರಿಮೆಂಟಿನಲ್ಲಿ ಮಹಡಿಯನ್ನು ಶಿವಣ್ಣ ಎನ್ನುವವರಿಗೆ ಕೊಟ್ಟಿರುತ್ತಾರೆ.

3. ತಕ್ಷೀರು ನಡೆದ ಕಟ್ಟಡದ ದಾಖಲೆ ನೀಡುವಂತೆ ಪುರಸಭಾ ಮುಖ್ಯಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಅದನ್ನು ಈಗಾಗಲೇ ಸಿಸಿ ನಂ: 2680/1999 ರಲ್ಲಿ ನಿಪಿ-4 ಎಂದು ಗುರುತಿಸಲಾಗಿದೆ. ದಿ: 26-1-1998 ರಂದು ತನಿಖೆ ಪೂರೈಸಿ ಆರೋಪಿತರ ವಿರುದ್ಧ

ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ. ಶ್ರೀಮತಿ ಕ್ಯಾರಿ ಇವರು ನಿಪಿ-3 ರಂತೆ ಹೇಳಿಕೆ ನೀಡಿರುತ್ತಾರೆ. ಸಿಪಿಐ ರವರಿಂದ ಪಡೆದ ಮು ಮಾ ಗಳನ್ನು ಈಗಾಗಲೇ ಮು ಮಾ 1 ರಿಂದ 5 ಎಂದು ಗುರುತಿಸಲಾಗಿದೆ.

ಆರೋಪಿತರು ತಲೆ ಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ